ಹಂಸಿನಿ. ನಾವಿರುವ ಈ ರಾಜಧಾನಿಯಲ್ಲಿ ಅನೇಕಾನೇಕ ಕಲಾವಂತಿಯರು, ಪುಣ್ಯಾಂಗನೆಯರು ಇದ್ದಾರೆ. ನೀನು ನೋಡಿದ್ದೀಯ. ಅವರ ರೀತಿನೀತಿಗಳಂತೆ, ಹಾವಭಾವಗಳಂತೆ ಶಕುಂತಲೆಯ ನಡೆಯಿತ್ತೆ ಎಂದೆ ಕಡೆಯದಾಗಿ.

ಛೇ ಛೇ! ಎಂತಹ ಮಾತಿದು ಒಡತಿ? ಅವಳ ಮುಖ ದೈವೀಕವಾದ ಪ್ರಭೆಯಿಂದ ಮಿಂಚುತ್ತಿತ್ತು. ತಾಯ್ತನದ ಅಪೂರ್ವ ಶೋಭೆಯೂ ಅವಳಿಗಿತ್ತು. ಕುಲಸ್ತ್ರೀಯರ  ಮಾತಿನಂತಲ್ಲದೆ, ಕುಲೀನ ಹೆಣ್ಣು ಮಕ್ಕಳಂತಲ್ಲದೆ ಅವಳ ಭಾವ ಭಂಗಿಗಳಲ್ಲಾಗಲೀ ಮಾತುಕತೆಯಲ್ಲಾಗಲೀ... ಯಾವುದೇ ಕೃತ್ರಿಮವಿರಲಿಲ್ಲ ಎಂದಳು.

ಸರಿ ನೀನಿನ್ನು ಹೊರಡು ನನಗಿಷ್ಟು ಏಕಾಂತ ಬೇಕು ಎಂದೆ.

ಹಂಸಪದಿಕೆಯ ಅಂತಃಪುರದ ತೆರೆದ ಬಾಗಿಲಲ್ಲಿ ನಾನು ನಿಂತಾಗ, ಅವಳ ಚೇಟಿ ನನ್ನನ್ನು ನೋಡಿ ನಮಿಸಿ ಒಡತಿಗೆ ಸುದ್ದಿ ಮುಟ್ಟಿಸಿದಳು. ಒಡನೆ ಬಾಗಿಲಿಗೆ ಬಂದ ಹಂಸಪದಿಕೆ ಆದರದಿಂದ ನನ್ನ ಕೈ ಹಿಡಿದು ಒಳ ಕರೆದೊಯ್ದು ಕುಳ್ಳಿರಿಸುತ್ತಾ ಕುಡಿಯುಲು ಹಾಲೋ ಅಥವಾ ತಣ್ಣಗಿನದೇನಾದರೂ ಎಂದು ಶಿಷ್ಟಾಚಾರದ ಮಾತಾಡಿದಳು. ನಡುವೆ ತಡೆಯುತ್ತಾ ಹಂಸಪದಿಕೆ, ನಿನ್ನೊಡನೆ ಏಕಾಂತದಲ್ಲಿ ಮಾತಾಡಬೇಕಿದೆ. ಪ್ರಭುಗಳ ಕುರಿತು ಎಂದೆ. ಅಲ್ಲಿದ್ದ ನಾಲ್ಕಾರು ಸಖಿಯರು ಹೊರಹೋಗಿ ಏಕಾಂತವೇರ್ಪಟ್ಟ ಮೇಲೆ ಹೇಳಿ ಮಹಾರಾಣಿ ನಿನ್ನೆ ಆಸ್ಥಾನದಲ್ಲಿ ನಡೆದ ವಿಷಯಕ್ಕಾಗಿಯೇ ಅಲ್ಲವೇ ನೀವಿಲ್ಲಿ ಬಂದಿರುವುದು. ನನ್ನ ಕಿವಿಗೂ ಅಷ್ಟಿಷ್ಟು ಬಿತ್ತು ಎಂದಳು ಮ್ಲಾನವದನದಿಂದ.

ಹೌದು ಹಂಸಪದಿಕೆ. ನಿನಗೇನನ್ನಿಸುತ್ತಿದೆ ಈ ಕುರಿತು? ಎಂದರೆ ಸಹಜವಾದ ದನಿಯಲ್ಲಿ ನನಗೇನೂ ತೋಚುತ್ತಿಲ್ಲ ಮಹಾರಾಣಿ. ಆದರೂ... ಈ ವಿಷಯದಲ್ಲಿ ನಾವು ಪ್ರಭುಗಳನ್ನೇ ನಂಬಬೇಕಲ್ಲವೇ? ಎಂದಳು.

ಅದು ನಮ್ಮ ಸತಿತ್ವದ ಮಾತಾಯಿತು. ಹೆಂಡಿರಾಗಿ ಬದುಕುವಾಗ ಪತಿಯಲ್ಲಿ ಅಪನಂಬಿಕೆ ಪಡದಿರುವುದೂ ನಮ್ಮ ಕರ್ತವ್ಯವೇ. ಆ ಕರ್ತವ್ಯದಾಚೆ ನಮ್ಮ ಅನಿಸಿಕೆ ಇರುತ್ತದೆಯಲ್ಲ ಎಂದೆ.

ಏನೋ ನನಗಿಷ್ಟೂ ನಿರ್ಧರಿಸಲಾಗುತ್ತಿಲ್ಲ: ನಾನು ನಿಮ್ಮಷ್ಟು ಬುದ್ಧಿಶಾಲಿಯಲ್ಲ ಎಂದಳು ಪೆಚ್ಚು ಮೋರೆಯಲ್ಲಿ. ಆಚೀಚೆ ನೋಡಿ ಯಾರೂ ಇಲ್ಲವೆಂದು ಖಚಿತಪಡಿಸಿಕೊಂಡು ಹಂಸಪದಿಕೆ ಒಂದು ಮಾತು ತುಂಬಾ ಆಪ್ತವಾದದ್ದು. ನಿನ್ನ ಪ್ರಭುಗಳ ನಡುವಿನದ್ದು ನಾನೂ ಕೇಳಬಾರದ್ದು... ನಾನೇನು ಯಾರೂ ಕೇಳಬಾರದ್ದು... ನಾನೀಗ ನಿನ್ನನ್ನು ಕೇಳುತ್ತಿದ್ದೇನೆ ಎಂದೆ.



**ಹಗಲುಗನಸು**

ಕನ್ನಡದ ಕೆಲಸಕ್ಕೆ<br>
ಕನ್ನಡಿಗರು<br>
ಕೊಡುತ್ತಾರೆ ಹಗಲು<br>
ಎಂದು<br>
ಅಂದುಕೊಂಡರೆ<br>
ನೀವು<br>
ಕನಸು ಕಂಡಂತೆ ಹಗಲು!

—ಗೀತಾ ಶಾಸ್ತ್ರಿ




ಪರವಾಗಿಲ್ಲ. ಅದೇನಿದ್ದರೂ ಕೇಳಿ ಎಂದಳು.

ಪ್ರಭುಗಳು ಮೃಗಯಾ ವಿಹಾರ ಮುಗಿಸಿ ಬಂದ ದಿನ ರಾತ್ರಿ... ನಿನ್ನ ಸಜ್ಜೆಗೆ ಬಂದಿದ್ದರು. ಸರಿ ತಾನೆ? ಎಂದರೆ ಹೂಂ ಎಂದಳು ಚುಟುಕಾಗಿ.

ಆ ರಾತ್ರಿ ಅವರು ನಿನ್ನೊಂದಿಗೆ ಮಾಮೂಲಿಯಾಗಿ... ಅಂದರೆ ದೀರ್ಘ ಅಗಲಿಕೆಯ ನಂತರ ಗಂಡನೊಬ್ಬ ಹೆಂಡತಿಯನ್ನು ಸೇರುವ ಕಾತರದಿಂದ... ನನ್ನ ಮಾತನ್ನು ಅರ್ಧದಲ್ಲೇ ತುಂಡರಿಸುತ್ತಾ ಇಲ್ಲ. ಅವರಾದಿನ... ಇಲ್ಲವೇ ಇಲ್ಲ. ಅದಿರಲಿ ಇದೇಕೆ? ಈ ಮಾತು ಕೇಳುತ್ತಿರುವಿರಿ? ಎಂದಳು.

ಹಂಸಪದಿಕೆ, ಪ್ರಭುಗಳ ಚರ್ಯೆ ನನಗೆ ಹೊಸದೇನಲ್ಲ. ಮದುವೆಯಾದ ಆ ಮೊದಲ ದಿನಗಳುಳಿದು ನಿರಂತರವಾಗಿ ಒಂದುಪವಾಸ ಒಂದು ಸುಗ್ರಾಿದ ಭೋಜನ... ಸರಿಯಷ್ಟೆ. ಇದು ಅವರ ಹಾಸಿಗೆಯ ನಿಯಮವಲ್ಲವೇ? ಎಂದಾಗ ಹೌದು ಎಂದಳು.

ಅಂದರೆ ಹದಿನೈದು ದಿನ ಕಾಲ ಅಗಲಿದ್ದವರು ಬಂದೊಡನೆ ಯಾರನ್ನೂ ಸಂಗಮಿಸಲಿಲ್ಲವೆಂದರೆ... ಎಂದೆ.

ಹೌದು ನಿಜವೇ ಇರಬಹುದು. ಅವರು ಶಕುಂತಲೆಯನ್ನು ಪರಿಗ್ರಹಿಸಿರ ಬಹುದು ಎಂದಳು.

ಇರಬಹುದೇನು? ಖಚಿತವಾಗಿ ಪರಿಗ್ರಹಿಸಿದ್ದಾರೆ. ಅದೇ ನನ್ನ ನಂಬಿಕೆ ಎಂದೆ ಆಸನ ಬಿಟ್ಟೇಳುತ್ತಾ.

ಇದ್ದರೂ ಅಷ್ಟೇ ಇಲ್ಲದಿದ್ದರೂ ಅಷ್ಟೇ ಇಂದಲ್ಲ ನಾಳೆ ಅವಳು ಈ ಅರಮನೆಯ ಭಾಗವಾದರೂ ಏನೂ ಮಾಡಲಾಗುವುದಿಲ್ಲವಲ್ಲ. ಏಷ್ಟೆಂದರೂ ನಾವು ಹೆಂಡಿರು ಎಂದಳು ನೋವಿನಿಂದ.

ಅವಳು ಅರಮನೆಗೆ ಬರುವುದು ನಿಶ್ಚಿತ. ಅವಳಿಗೇನಾದರೂ ಪುತ್ರ ಜನನವಾದರೆ ಪಟ್ಟದರಸಿಯೂ ಆಗಬಹುದು ಎಂದೆ ವಿಷಾದದಿಂದ. ಇದಾಗಿ ನಾಲ್ಕೈದು ವಸಂತಗಳು ಕಳೆದು, ಇನ್ನು ಆ ಭಯವಿಲ್ಲವೆಂದುಕೊಂಡು ನಿರಾಳವಾಗಿದ್ದ ದಿನಗಳಲ್ಲಿ ಒಂದು ದಿನ ಹಂಸಪದಿಕೆ ಓಡುತ್ತಾ ನನ್ನ ಅಂತಃಪುರಕ್ಕೆ ಬಂದು ಮಹಾರಾಣಿ ಶಕುಂತಲೆ ಅರಮನೆಗೆ ಬಂದಿದ್ದಾಳೆ. ಮುತ್ತಿನ ಪಡಿ ಇಟ್ಟು ಆರತಿ ಮಾಡಿ ಒಳ ಕರೆದುಕೊಳ್ಳಲು ಸುವಾಸಿನಿಯರ ದಂಡೇ ಅರಮನೆಯ ಬಾಗಿಲಲ್ಲಿ ನೆರೆದಿದೆಯಂತೆ. ಅವಳೊಡನೆ ಪ್ರಭುಗಳ ಮಗನೂ ಬಂದಿರುವನಂತೆ. ತದ್ರೂಪು ಪ್ರಭುಗಳಂತೆಯೇ ಇರುವನಂತೆ. ಇನ್ನು ಮುಂದೆ ಅವಳೇ ಪಟ್ಟದ ರಾಣಿಯಂತೆ ಎಂದಳು.

ಏನು ಶಕುಂತಲೆಯ ಮಗನ ಹೆಸರೇನಂದೆ? ಎಂದೆ ನಡುಗುತ್ತಾ. ಸರ್ವದಮನ ಎಂದಳು. ನನ್ನ ಆಶೋತ್ತರಗಳೆಲ್ಲವೂ, ಸರ್ವಸ್ವವೂ ದಮನ ವಾದಂತೆನಿಸಿ ಉಮ್ಮಳಿಸಿ ಬಂದ ದುಃಖವನ್ನು ಆನಂದವಾಗಿ ಪರಿವರ್ತಿಸುತ್ತಾ ಆಹಾ! ಸರ್ವದಮನನೇ! ನಮ್ಮ ಚಂದ್ರವಂಶ ಬೆಳೆಯಿತು. ನಮಗೀಗ ಪುತ್ರೋತ್ಸವದ ಸಂಭ್ರಮ ನಡೆಯಿರಿ. ರಾಜಪುತ್ರನನ್ನೂ ಪಟ್ಟದರಸಿಯನ್ನು ಎದುರುಗೊಳ್ಳೋಣ ಎಂದೆ. ಪಕ್ಕದಲ್ಲಿದ್ದ ರಾಜಮಾತೆಯವರು ನಮ್ಮ ಲಕ್ಷಣೆಯ ಗುಣಕ್ಕೆ ಎಣೆಯೇ ಇಲ್ಲ. ಸೊಸೆಯೆಂದರೆ ಹೀಗಿರಬೇಕು ಎನ್ನುತ್ತಾ ಮುಂದೆ ನಡೆದರು. ನಾನೂ ಹೆಜ್ಜೆ ಹಾಕುತ್ತಾ ಅನುಸರಿಸತೊಡಗಿದೆ.